ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	632
ಮಾನ್ಯ ಸದಸ್ಯರ ಹೆಸರು	ಶ್ರೀಮತಿ ಭಾರತಿ ಶೆಟ್ಟಿ (ನಾಮ ನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ	21/2/2022
ಉತ್ತರಿಸಬೇಕಾದ ಸಚಿವರು	ಮಾನ್ಯ ಆರೋಗ್ಯ & ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
(ಅ)	ರಾಜ್ಯದಲ್ಲಿ ಯಾವ ಯಾವ ಖಾಸಗಿ ಕಾಲೇಜುಗಳಲ್ಲಿ ಸರ್ಕಾರಿ ಸೀಟುಗಳನ್ನು ಸಿಇಟಿ ಹಂಚಿಕೆ ಮಾಡುತ್ತಿದೆ; (ಅಂಕಿ-ಅಂಶ ಸಹಿತ ವಿವರ ಒದಗಿಸುವುದು)	2021ನೇ ಸಾಲಿಗೆ ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಒಟ್ಟು 1694 ಸರ್ಕಾರಿ ಕೋಟಾದ ವೈದ್ಯಕೀಯ ಸೀಟುಗಳು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಸೀಟು ಹಂಚಿಕೆಗೆ ಲಭ್ಯವಿರುತ್ತದೆ. (ವಿವರವನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ)
(ಆ)	ಸದರಿ ವಿದ್ಯಾರ್ಥಿಗಳ ಇಂಟರ್‌ಷಿಪ್ (Intership) ಅವಧಿಯಲ್ಲಿ ಮಾಹೆಯಾನ ನೀಡಲಾಗುತ್ತಿರುವ ಸ್ಟೈಫಂಡ್ ಎಷ್ಟು; (ಅಂಕಿ-ಅಂಶ ಸಹಿತ ವಿವರ ಒದಗಿಸುವುದು)	ಆದೇಶ ಸಂ: ಎಂಇಡಿ 49 ಆರ್.ಜಿ.ಯು. 2020 ದಿ:16/05/2020 ರನ್ವಯ ರಾಜ್ಯದ ಸ್ವಾಯತ್ತ ವೈದ್ಯಕೀಯ ಸಂಸ್ಥೆಗಳಲಿ ವ್ಯಾಸಂಗ ಮಾಡುತ್ತಿರುವ ಮತ್ತು ಕಾರ್ಯನಿರ್ವಹಿಸುತ್ತಿರುವ ಗೃಹವೈದ್ಯ ಸ್ನಾತಕೋತ್ತರ, ಸೂಪರ್ ಸ್ಪೆಷಾಲಿಟಿ, ಫೆಲೋಶಿಪ್ ವಿದ್ಯಾರ್ಥಿಗಳು ಮತ್ತು ಕಡ್ಡಾಯ ಸರ್ಕಾರಿ ಸೇವೆ ಸಲ್ಲಿಸುತ್ತಿರುವ ಸೀನಿಯರ್ ರೆಸಿಡೆಂಟ್ ಗಳಿಗೆ ಮಾಸಿಕ ಶಿಷ್ಯವೇತನವನ್ನು ಕೆಳಕಂಡಂತೆ ಪಾವತಿಸಲಾಗುತ್ತಿದೆ. (ಕೆಳಗಿನ ಕೋಷ್ಟಕ ನೋಡಿ)
(ಇ)	ಸ್ಟೈಫಂಡ್‌ಗಾಗಿ ಎಲ್ಲೆಲ್ಲಿ ಮುಷ್ಕರ ನಡೆಸಲಾಗಿದೆ. ಮುಷ್ಕರ ನಂತರ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;	ಜುಲೈ-2020ನೇ ಸಾಲಿನಲ್ಲಿ 16 ತಿಂಗಳ ಶಿಷ್ಯವೇತನ ಬಿಡುಗಡೆಗೆ ಆಗ್ರಹಿಸಿ ಜೆ.ಜೆ.ಎಂ. ಕಾಲೇಜು ವಿದ್ಯಾರ್ಥಿಗಳು ಮುಷ್ಕರ ನಡೆಸಿದ್ದರಿಂದ, ಮಾನ್ಯ ಇಲಾಖಾ ಸಚಿವರ ಹಂತದಲ್ಲಿ ಸಭೆ ನಡೆಸಿ, 2020-21 ನೇ ಶೈಕ್ಷಣಿಕ ವರ್ಷದಲ್ಲಿ ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಜೆ.ಜೆ.ಎಂ. ವೈದ್ಯಕೀಯ ಮಹಾವಿದ್ಯಾಲಯ, ದಾವಣಗೆರೆ ಇಲ್ಲಿ ಸರ್ಕಾರಿ ಕೋಟಾದಡಿ ಕರ್ತವ್ಯ ನಿರ್ವಹಿಸುತ್ತಿರುವ ಗೃಹ ವೈದ್ಯರು ಮತ್ತು ಸ್ನಾತಕೋತ್ತರ ವೈದ್ಯ ವಿದ್ಯಾರ್ಥಿಗಳಿಗೆ ಮಾರ್ಚ್-2019 ರಿಂದ ಜೂನ್-2020 ರವರೆಗೆ ಶಿಷ್ಯವೇತನ ಪಾವತಿಗಾಗಿ ರೂ.1075.00 ಲಕ್ಷಗಳನ್ನು ಸರ್ಕಾರದ ಆದೇಶ ಸಂ: ಎಂಇಡಿ 04 ಆರ್.ಜಿ.ಯು. 2019 ದಿನಾಂಕ:11/11/2020ರಲ್ಲಿ ಬಿಡುಗಡೆಗೊಳಿಸಿ ಆದೇಶಿಸಲಾಗಿದೆ.

ಗೃಹವೈದ್ಯರು	30000
ಸ್ನಾತಕೋತ್ತರ ವೈದ್ಯ ವಿದ್ಯಾರ್ಥಿಗಳು	
1ನೇ ವರ್ಷ	45000
2ನೇ ವರ್ಷ	50000
3ನೇ ವರ್ಷ	55000
ಸೂಪರ್ ಸ್ಪೆಷಾಲಿಟಿ ವೈದ್ಯಕೀಯ ವಿದ್ಯಾರ್ಥಿಗಳು	
1ನೇ ವರ್ಷ	55000
2ನೇ ವರ್ಷ	60000
3ನೇ ವರ್ಷ	65000
ಸೀನಿಯರ್ ರೆಸಿಡೆಂಟ್ಸ್ (ಕಡ್ಡಾಯ ಸರ್ಕಾರಿ ಸೇವೆ)	60000
ಫೆಲೋಶಿಪ್ ವಿದ್ಯಾರ್ಥಿಗಳು	60000

(ಈ)	ಸದರಿ ಸ್ಟೈಫಂಡ್‌ನ್ನು ಸಕಾಲಿಕವಾಗಿ ಹಂಚಿಕೆ ಮಾಡಲು ಸರ್ಕಾರಕ್ಕೆ ಇರುವ ಸಮಸ್ಯೆಗಳೇನು;	ಸರ್ಕಾರಿ ಕೋಟಾದಡಿ ಆಯ್ಕೆಯಾದ ಸ್ನಾತಕೋತ್ತರ ವೈದ್ಯ ವಿದ್ಯಾರ್ಥಿಗಳು ಹಾಗೂ ಗೃಹವೈದ್ಯ ವಿದ್ಯಾರ್ಥಿಗಳಿಗೆ MCI Regulation 2000 ನಿಯಮ 13.3 ರನ್ವಯ ಸಂಬಂಧಪಟ್ಟ ಖಾಸಗಿ ಕಾಲೇಜಿನವರೇ ಶಿಷ್ಯವೇತನ ಪಾವತಿಸಬೇಕಾಗಿರುತ್ತದೆ. ಹಾಗೂ 2016-17ನೇ ಸಾಲಿನಲ್ಲಿ ಮಹಾಲೇಖಪಾಲರು ಲೆಕ್ಕ ತಪಾಸಣೆ ಮಾಡಿದ ಸಂದರ್ಭದಲ್ಲಿ, ಶಿಷ್ಯವೇತನ ನೀಡಿರುವುದಕ್ಕ ಆಕ್ಷೇಪಣೆ ವ್ಯಕ್ತಪಡಿಸಿರುತ್ತಾರೆ.
(ಉ)	ದಾವಣಗೆರೆ ಜೆ.ಜೆ.ಎಂ.ಕಾಲೇಜು ವಿದ್ಯಾರ್ಥಿಗಳಿಗೆ ಪ್ರತಿ ಬಾರಿಯು ಮುಷ್ಕರ ನಡೆಸಿ ಸ್ಟೈಫಂಡ್ ಪಡೆಯುವ ದುಸ್ಥಿಗೆ ಕಾರಣಗಳೇನು;	ಜೆ.ಜೆ.ಎಂ. ಮೆಡಿಕಲ್ ಕಾಲೇಜು, ದಾವಣಗೆರೆ ಇಲ್ಲಿ ಸರ್ಕಾರಿ ಕೋಟಾದಡಿ ಆಯ್ಕೆಯಾದ ಸ್ನಾತಕೋತ್ತರ ವೈದ್ಯ ವಿದ್ಯಾರ್ಥಿಗಳು ಹಾಗೂ ಗೃಹವೈದ್ಯ ವಿದ್ಯಾರ್ಥಿಗಳಿಗೆ ಮಾರ್ಚ್-2019 ರಿಂದ ಜೂನ್-2020 ರವರೆಗೆ ಪಾವತಿಸಲು ರೂ.10,75,00,000/-ಗಳನ್ನು ಬಿಡುಗಡೆ ಮಾಡುವಂತೆ ಕೋರಿದ್ದರ ಹಿನ್ನೆಲೆಯಲ್ಲಿ 2020-21 ನೇ ಶೈಕ್ಷಣಿಕ ವರ್ಷದಲ್ಲಿ ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಜೆ.ಜೆ.ಎಂ. ವೈದ್ಯಕೀಯ ಮಹಾವಿದ್ಯಾಲಯ, ದಾವಣಗೆರೆ ಇಲ್ಲಿ ಸರ್ಕಾರಿ ಕೋಟಾದಡಿ ಕರ್ತವ್ಯ ನಿರ್ವಹಿಸುತ್ತಿರುವ ಗೃಹ ವೈದ್ಯರು ಮತ್ತು ಸ್ನಾತಕೋತ್ತರ ವೈದ್ಯ ವಿದ್ಯಾರ್ಥಿಗಳಿಗೆ ಮಾರ್ಚ್-2019 ರಿಂದ ಜೂನ್-2020 ರವರೆಗೆ ಶಿಷ್ಯವೇತನ ಪಾವತಿಗಾಗಿ ರೂ.1075.00 ಲಕ್ಷಗಳನ್ನು ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಇವರಿಗೆ ಈ ಕೆಳಕಂಡ ಷರತ್ತುಗಳಿಗೊಳಪಟ್ಟು, ಒಂದು ಬಾರಿ ಕ್ರಮವಾಗಿ ಮಾತ್ರ ಸರ್ಕಾರದ ಆದೇಶ ಸಂ: ಎಂಇಡಿ 04 ಆರ್.ಜಿ.ಯು. 2019 ದಿನಾಂಕ:11/11/2020ರ ಆದೇಶದಲ್ಲಿ ಬಿಡುಗಡೆಗೊಳಿಸಿ ಆದೇಶಿಸಲಾಗಿದೆ. 1. ಇದೇ ಉದ್ದೇಶಕ್ಕಾಗಿ ಮುಂದಿನ ದಿನಗಳಲ್ಲಿ ಅನುದಾನ ಒದಗಿಸಲಾಗುವುದಿಲ್ಲ. 2. ಜುಲೈ-2020ರಿಂದ ಮುಂದೆ ಜೆ.ಜೆ.ಎಂ. ವೈದ್ಯಕೀಯ ಕಾಲೇಜು, ದಾವಣಗೆರೆ ಈ ಸಂಸ್ಥೆಯು ತನ್ನ ಸಂಪನ್ಮೂಲದಿಂದಲೇ ಕರ್ತವ್ಯ ನಿರ್ವಹಿಸುತ್ತಿರುವ ಗೃಹ ವೈದ್ಯರು ಮತ್ತು ಸ್ನಾತಕೋತ್ತರ ವೈದ್ಯ ವಿದ್ಯಾರ್ಥಿಗಳಿಗೆ ಶಿಷ್ಯ ವೇತನ ಪಾವತಿಸತಕ್ಕದ್ದು.
(ಊ)	ಮುಷ್ಕರದ ಪರಿಣಾಮ ರೋಗಿಗಳ ಮೇಲೆ ದುಷ್ಪರಿಣಾಮ ಬೀರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದ ಸ್ಪಷ್ಟೀಕರಣವೇನು;	
(ಋ)	ಮುಂದಿನ ದಿನಗಳಲ್ಲಿ ಈ ರೀತಿಯ ಸಮಸ್ಯೆಗಳು ಉದ್ಭವಿಸದಂತಿರಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;	ಸರ್ಕಾರಿ ಕೋಟಾದಡಿ ಪ್ರವೇಶ ಪಡೆದು ಜೆ.ಜೆ.ಎಂ. ಮೆಡಿಕಲ್ ಕಾಲೇಜು, ದಾವಣಗೆರೆ ಇಲ್ಲಿ ವ್ಯಾಸಂಗ ಮಾಡುತ್ತಿರುವ ಸ್ನಾತಕೋತ್ತರ ಹಾಗೂ ಗೃಹವೈದ್ಯ ವಿದ್ಯಾರ್ಥಿಗಳಿಗೆ ಮಾರ್ಚ್-2019 ರಿಂದ ಜೂನ್-2020 ರವರೆಗೆ ಶಿಷ್ಯವೇತನ ಪಾವತಿಸಲು ಜೆ.ಜೆ.ಎಂ. ಮೆಡಿಕಲ್ ಕಾಲೇಜು, ದಾವಣಗೆರೆ ಇವರು "The Management undertakes to pay stipend to the MBBS students admitted under Government quota and who have been posted to Chigateri General Hospital for Internship at the rates prescribed by the state Government/competent/appropriate authority during their Internship, with effect from 1st July 2020" ಎಂದು ಮುಚ್ಚಳಿಕೆ ಪತ್ರ ನೀಡಿರುತ್ತಾರೆ. ಮುಚ್ಚಳಿಕೆ ಪತ್ರದಂತೆ ಕ್ರಮವಹಿಸಲು ಸಂಸ್ಥೆಗೆ ತಿಳಿಸಲಾಗಿದೆ.
(ಎ)	ಈ ಬಗ್ಗೆ ಸರ್ಕಾರ ಮತ್ತು ಕಾಲೇಜುಗಳು ಚರ್ಚಿಸಿ ಅಂತಿಮ ಪರಿಹಾರ ಕಂಡುಕೊಳ್ಳುವುದೇ?	

ಕಡತ ಸಂ: ಎಂಇಡಿ 65 ಎಂ ಎಸ್ ಎಫ್ 2022

(ಡಾ|| ಕೆ. ಸುಧಾಕರ್)
ಆರೋಗ್ಯ & ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು.